ಗೀತಾ ಬರ್ಲ, ಬೆಂಗಳೂರು

*ಮೂರು ಬಿಟ್ಟವ ಊರಿಗೇ ದೊಡ್ಡವ ಎಂಬಂತೆ ಕೆಲವರು ಏಕೆ ವರ್ತಿಸುತ್ತಾರೆ?*



ಸರಿಯೇ! ಮೂರೂ (ಗಡ್ಡ, ಮೀಸೆ, ಕೂದಲು) ಬಿಟ್ಟವರೇ ದೊಡ್ಡ ದೊಡ್ಡ ಆಶ್ರಮಗಳ ದೊಡ್ಡ ದೊಡ್ಡ ಗುರುಗಳು!

ಹೆಚ್.ಆರ್. ಕಡಿವಾಲ, ಬದಾಮಿ

*ಮಾತಿಗೊಮ್ಮೆ ನೀನೇನು ಸತ್ಯಹರಿಶ್ಚಂದ್ರನೇ ಅಂತಾರಲ್ಲಾ...?*

ಹೂಂ ಎಂದರೆ ನಕ್ಷತ್ರಿಕನಾಗಿ ಕಾಡುವ ಹಂಬಲವಂತೆ!

ಜಾಕೋಬ್ ಡಿಸೋಜ, ಕುರುವಳ್ಳಿ

*ಎತ್ತು ಏರಿಗೆಳೆದರೆ ಕೋಣ ನೀರಿಗೆಳೆಯಿತಂತೆ, ಏಕೆ ಸಾರ್?*

ಎತ್ತು ಭಾರ ಎತ್ತಿ ಬೆವತಿದ್ದರಿಂದ ಸ್ನಾನ ಮಾಡಿಸಲು!

ಕಲಾವಿದ ಸೀನು, ಚಿತ್ರದುರ್ಗ

*ನಮ್ಮ ದೇಶದ ಸಂಸ್ಕೃತಿಯ ಪ್ರತೀಕವಾದ ಕೈಬಳೆಗಳನ್ನು ಈಗಿನ ಹುಡುಗಿಯರು ಕಡೆಗಣಿಸಿದ್ದಾರಲ್ಲಾ...?*



ಮೂಲಂಗಿ ಹಾಫ್‌ಪ್ಯಾಂಟ್, ಕರ್ಚೀಫ್ ಅಳತೆಯ ಟಾಪ್‌ಗೆ ಕೈಬಳೆ ಮ್ಯಾಚ್ ಆಗುವುದಿಲ್ಲವಂತೆ!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಏನು! ಜನಸೇವೆ ಮಾಡಲು ಮುಖ್ಯಮಂತ್ರಿ ಪಟ್ಟವೇ ಬೇಕೆ?*

ಹಾಗೇನಿಲ್ಲ, ಪ್ರಧಾನಿಯ ಪಟ್ಟವಾದರೂ ಆದೀತು!

ಸಾರಂಗ್, ಮಧುಗಿರಿ

*ನಕ್ಕರೆ ಅದೇ ಸ್ವರ್ಗ ಎಂದು ದೊಡ್ಡಗೌಡರು, ಎಡ್ಡಿಗೆ ಗೊತ್ತಿಲ್ಲವೇ?*

ತಿಳಿದಿದೆ. ನಕ್ಕರೆ ಸ್ವರ್ಗಸ್ಥರಾಗಿ ಬಿಡಬಹುದೆಂಬ ಭಯದಿಂದ ನಗುವುದಿಲ್ಲ!

ಶ್ರೀಕಾಂತ ಸುಗಂಧಿ, ಮಸ್ಕಿ

*ಶಿವನ ತಲೆಯ ಮೇಲೆ ಗಂಗಾಮಾತೆಯೇ ಇದ್ದರೂ, ಜಾಗರಣೆಯ ದಿನ ಗಂಗಾಜಲವನ್ನು ಶಿವನ ತಲೆಯ ಮೇಲೆ ಹಾಕಿದರಂತಲ್ಲಾ, ಏಕೆ?*

ಶಿವನಿಗೆ ತಲೆಬಿಸಿ ಹೆಚ್ಚಾದುದರಿಂದ ಗಂಗೆ ಆವಿಯಾಗಿದ್ದಳಂತೆ!

ಎಂ.ಬಿ.ಕೃಷ್ಣಮೂರ್ತಿ, ಚಾಮರಾಜನಗರ

*ಸ್ಕೂಲ್ ಮಾಸ್ಟರ್, ಪೋಸ್ಟ್ ಮಾಸ್ಟರ್, ಸ್ಟೇಷನ್ ಮಾಸ್ಟರ್ ಇವರುಗಳಿಗೆ ಇರುವ ವ್ಯತ್ಯಾಸವೇನು ಸಾರ್?*

ಮೂವರಿಗೂ ಕ್ರಮವಾಗಿ ಅಂಕ, ಅಂಕಿತ, ಅಂಕೆಗಳು ಮುಖ್ಯ!

ಚೈತ್ರ, ಕೆ.ಎಂ. ದೊಡ್ಡಿ

*ಎಲ್ಲಾ ಹೂಗಳಿಗೂ ಹೆಣ್ಣಿನ ಹೆಸರೇ ಇದೆ, ಆದರೆ ಗಂಡಿನ ಹೆಸರಿಲ್ಲ. ಏಕೆ?*

ಈ ಮಾತನ್ನು ಕೇಳಿದ ಬ್ರಹ್ಮಕಮಲ ಮತ್ತು ಸುಗಂಧರಾಜ ನಿಮ್ಮ ಮೇಲೆ ಕೇಸ್ ಹಾಕುತ್ತವಂತೆ!

ಎಚ್.ಆರ್. ದೇಸಾಯಿ, ರಾಯಚೂರು

*ಚಂದ್ರನ ಬದಲು ರಾತ್ರಿಯೂ ಇನ್ನೊಬ್ಬ ಸೂರ್ಯ ಇದ್ದಿದ್ದರೆ?*

ಸೂರ್ಯನಿಗೇ ಕೂಲಿಂಗ್ ಗ್ಲಾಸ್ ಹಾಕಬೇಕಾಗುತ್ತಿತ್ತು!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಹೀರೋಯಿನ್‌ಗೂ, ಹೆರಾಯಿನ್‌ಗೂ ಇರುವ ವ್ಯತ್ಯಾಸವೇನು?*

ಹೀರೋಯಿನ್‌ನಿಂದ ಚಿತ್ರಗೃಹ ಹೌಸ್ ಫುಲ್, ಹೆರಾಯಿನ್‌ನಿಂದ ಚಿತಾಗೃಹ ಹೌಸ್‌ಫುಲ್!

ಡಿ.ಎಲ್.ನಾಗರಾಜ್, ಚನ್ನಗಿರಿ

*ದಂಡುಪಾಳ್ಯದ ಪೂಜಾಗಾಂಧಿ ಗೌಡರ ಪಾಳ್ಯಕ್ಕೆ ಜಿಗಿಯಲು ಕಾರಣವೇನು?*

ಗೌಡರು ಹೆಣ್ಣಿನ ವಿಷಯದಲ್ಲಿ ಪೂಜಾ ಭಾವ ಹೊಂದಿರುವುದರಿಂದ!

ಮಾನಸ ಎಂ, ಶಿವಮೊಗ್ಗ

*ಪುಸ್ತಕದ ಪ್ರೇಮ ಮಸ್ತಕಕ್ಕೆ ಪೂರಕ, ಪ್ರೇಮಿಗಳ ಸ್ನೇಹ...?*

ಸಬ್‌ರಿಜಿಸ್ಟ್ರಾರ್ ಆಫೀಸಿನ ನೋಂದಣಿ ಪುಸ್ತಕಕ್ಕೆ ಪೂರಕ!

## ಬಹುಮಾನಿತ ಪ್ರಶ್ನೆ

ಪಿ.ಜೆ.ರಾಘವೇಂದ್ರ, ಮೈಸೂರು

*ಕಳ್ಳಭಟ್ಟಿ ಕುಡಿದು ಸತ್ತವರಿಗೆ ಪರಿಹಾರವಿದೆ, ಹಸಿವೆಯಿಂದ ಸತ್ತವರಿಗೆ ಏಕಿಲ್ಲ?*

ಕುಡುಕನಿಗೆ ಪರಿವಾರವಿರುತ್ತದೆ, ಹಸಿದವ ಅನಾಥ; ಪರಿವಾರ ಇರುವವರಿಗೆ ಮಾತ್ರ ಪರಿಹಾರ!

ಮೊಳಕಾಲ್ಮೂರು ಸುರೇಶ್, ಬಳ್ಳಾರಿ

*ಜೀವನದಲ್ಲಿ ಎಲ್ಲರೂ ಒಮ್ಮೆಯಾದರೂ ಸೋಲಲೇಬೇಕಂತೆ. ನೀವೆಷ್ಟು ಬಾರಿ ಸೋತಿರುವಿರಿ?*

ಲೆಕ್ಕವೇ ಇಲ್ಲ. ಪ್ರೀತಿ ಕಂಡಾಗಲೆಲ್ಲಾ ಸೋತಿದ್ದೇನೆ, ಚೆಲುವು ಕಂಡಾಗಲೆಲ್ಲಾ ಮನಸೋತಿದ್ದೇನೆ!

ಸುನಂದ ಲೋಕೇಶರೆಡ್ಡಿ, ದಾವಣಗೆರೆ

*ದೇವನನ್ನು ಬರೀ ಬೇಡುವುದೇ ಆಯಿತು, ಆದರೆ ಅವನನ್ನು ನೀನು ಹೇಗಿದ್ದೀಯ, ನಿನ್ನ ಆರೋಗ್ಯ ಹೇಗಿದೆ ಎಂದು ಯಾರೂ, ಯಾವತ್ತೂ ಕೇಳಿಲ್ಲವಲ್ಲಾ, ಯಾಕೆ?*

ಬ್ಯಾಡ್ರ ಕಣ್ಣಪ್ಪ ಹಾಗೆ ಕೇಳಿದ್ದಕ್ಕೆ ತನ್ನ ಕಣ್ಣೇ ಕೊಡ್ಬೇಕಾಯ್ತಲ್ಲ, ಅದಕ್ಕೇ ದೇವನ ಆರೋಗ್ಯದ ವಿಷ್ಯ ಎತ್ತೋದೇ ಬ್ಯಾಡ ಕಣ್ರಪ್ಪ ಅಂತ ಸುಮ್ನಾಗಿದಾರೆ!

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಪೆಟ್ರೋಲ್: ಇದರ ನಿಜವಾದ ಅರ್ಥ?*



ಧನ ಕರಗಿಸುವ ಇಂಧನ!

ಆರೀಫ್, ದಾವಣಗೆರೆ

*ಪ್ರೇಮಿಗಳ ದಿನದಂದು ಪ್ರೇಮಿಗಳು ಹೆಚ್ಚಾಗಿ ಮರದ ಮರೆಯಲ್ಲಿ ಇರಲು ಬಯಸುವುದು ಏಕೆ?*

ಅವರ ಪ್ರೇಮವೂ ಆ ಮರದ ಎಲೆಗಳಂತೆಯೇ ಚಿಗುರಿ, ಮರದಂತೆಯೇ ಫಲ ನೀಡಿ, ಮರದಷ್ಟೇ ದೃಢವಾಗಿ, ಮರದಷ್ಟೇ ದೀರ್ಘಕಾಲ ಇರಲೆಂದು!

ಬಸವಣ್ಣ ಹೊನಖಾಂಡೆ, ಬಸವನ ಬಾಗೇವಾಡಿ

*ಎಲೆಮರೆಯ ಕಾಯಿಯಂತೆಯೇ ಇದ್ದು ಜನಸೇವೆ ಮಾಡುತ್ತಿರುವ ವ್ಯಕ್ತಿಯನ್ನು ಹೇಗೆ ಸನ್ಮಾನಿಸಬೇಕು?*

ಏಕೆ ಸನ್ಮಾನಿಸಬೇಕು? ಆತ್ಮತೃಪ್ತಿ ಇರುವವರಿಗೆ ಪ್ರಶಸ್ತಿ ಕಸ!

■ ರಾಮ್